**ಡಿ.ಡಬ್ಲ್ಯೂ -1**

**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ01-04-2021**

**ಪಾಟೀ ಸವಾಲುಃ 1 ಮತ್ತು 3 ನೇ ವಾದಿ ಪರ ಶ್ರೀ ಟಿ ಎಂ ಎ ವಕೀಲರಿಂದ**

ನಾನು ಕಳೆದ 30 ವರ್ಷಗಳಿಂದ ಬಂಟ್ವಾಳ ನಗರದಲ್ಲಿ ನೆಲೆಸಿರುತ್ತೇನೆ. ವಾದಿ ದಾವಾ ಸ್ವತ್ತಿನಲ್ಲಿ ವಿಭಾಗ ಕೋರಿ ಪ್ರಸ್ತುತ ದಾವೆ ಸಲ್ಲಿಸಿರುತ್ತಾರೆ. ನನ್ನ ತಾಯಿ ಮನೆ ಖರೀದಿಸಿರುವ ವಿಚಾರ ನನಗೆ ಗೊತ್ತು. ಸದರಿ ಮನೆಯ ಕ್ರಯ ಕರಾರು ಪತ್ರ ಸಕಲೇಶಪುರದ ಉಪನೊಂದಣಾಧಿಕಾರಿಯವರ ಕಚೇರಿಯಲ್ಲಿ ನೊಂದಣಿಯಾಗಿರುತ್ತದೆ. ನನ್ನ ತಾಯಿ ತನ್ನ ಪತ್ರ ವ್ಯವಹಾರಗಳಲ್ಲಿ ತನ್ನ ಎಡಗೈ ಹೆಬ್ಬೆಟಿನ ಗುರುತು ಹಾಕುತ್ತಾರೆ. ನನ್ನ ತಾಯಿ ನಿ.ಡಿ-1 ನ್ನು ಯಾವಾಗ ಬರೆದಿರುತ್ತಾರೆ ಎಂದು ನನಗೆ ನೆನಪಿಲ್ಲ. ನಿ.ಡಿ-1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ. ನಿ.ಡಿ-1 ನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಿ.ಡಿ-1 ರಲ್ಲಿ ಯಾರ ಸಹಿ ಇದೆ ಎಂದು ನನಗೆ ಗೊತ್ತಿರುವುದಿಲ್ಲ. ನಿ.ಡಿ-1 ರಲ್ಲಿರುವ ಎಡಗೈ ಹೆಬ್ಬೆಟಿನ ಗುರುತು ಯಾರದು ಎಂದು ನನಗೆ ಗೊತ್ತಿರುವುದಿಲ್ಲ. ನಿ.ಡಿ-1 ಎ ನನ್ನ ಸಹಿ ಆಗಿರುವುದಿಲ್ಲ. ನಿ.ಪಿ-5 ರಲ್ಲಿ ಶಕೀನ ಎಂದು ಬರೆಯಲಾದ ಹೆಸರಿನ ಪಕ್ಕದಲ್ಲಿರುವ ಹೆಬ್ಬೆಟಿನ ಗುರುತು ನನ್ನ ತಾಯಿಯ ಎಡಗೈ ಹೆಬ್ಬೆಟಿನ ಗುರುತು ಆಗಿರುತ್ತದೆ. ನನ್ನ ತಾಯಿ ವಿಲ್ ಬರೆದಿರುವ ವಿಚಾರ ನನ್ನ ಮುಂದೆ ಯಾವಾಗಲೂ ಪ್ರಸ್ತಾಪ ಮಾಡಿರುವುದಿಲ್ಲ.

ನಾನು ನ್ಯಾಯಾಲಯದಲ್ಲಿ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ ಸಲ್ಲಿಸಿದ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ವಿಚಾರ ಗೊತ್ತಿರುವುದಿಲ್ಲ. ನ್ಯಾಯಾವಾದಿಗಳು ಸಹಿ ಮಾಡು ಎಂದು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ ಎಂದರೆ ಸರಿ.

**ಮರು ವಿಚಾರಣೆ : ಇಲ್ಲ.**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**